# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 21, ಹೆಬ್ಬಾಳ, ಬೆಂಗಳೂರು-24

ಸಂಖ್ಯೆ: ಸ.ಅ/ವಾ-21/ಪಿ.ಆರ್/24/2022-23 ದಿನಾಂಕ:07-06-2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

ವಿಷಯ:- ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 04-06-2022 ರಂದು ವಾರ್ಡ್ ನಂ:21 ಹೆಬ್ಬಾಳದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

## :: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಂ.ವಿಘ್ನೇಶ್ವರ | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ. ಶ್ರೇಯಸ್ ಎಂ.ಎಸ್ | ಸಹಾಯಕ ಅಭಿಯಂತರರು (ಕಿಯಾನಿಕ್ಸ್) ವಾಡ್ ನಂ. 21 |
| 3. | ಶ್ರೀಮತಿ ಉಷಾರಾಣಿ.ಸಿ.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ. ವೆಂಕಟೇಶ್ | ತೋಟಗಾರಿಕ ನಿರೀಕ್ಷಕರು |
| 5. | ಶ್ರೀ ವಿವೇಕ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6. | ಶ್ರೀ. ಜಗದೀಶ್ ರೆಡ್ಡಿ | ಹೆಬ್ಬಾಳ ಸಂಚಾರಿ ಪೊಲೀಸ್ |
| 7. | ಶ್ರೀ.ಜಿ.ಸ್ವಾಮಿ | ವರ್ಕ್ ಇನ್ಸ್‌ಪೆಕ್ಟರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 8. | ಶ್ರೀ. ಬಸವರಾಜ | ಬಿ.ಬಿ.ಎಂ.ಪಿ ಮಾರ್ಷಲ್ (ವಾರ್ಡ್ ಸಂಖ್ಯೆ-21) |
| 9. | ಶ್ರೀ. ಸೀನಪ್ಪ | ಅಧ್ಯಕ್ಷರು 1ನೇ ಬ್ಲಾಕ್ ಆನಂದ ನಗರ |
| 10. | ಶ್ರೀ. ವೀರಶೇಖರ ಸ್ವಾಮಿ | ಕಾರ್ಯದರ್ಶಿ, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, |
| 11. | ಶ್ರೀ. ಎನ್ ಶ್ರೀನಿವಾಸನ್ | ಉಪಾಧ್ಯಕ್ಷರು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, 1ನೇ ಬ್ಲಾಕ್. |
| 12. | ಶ್ರೀ. ಪ್ರಕಾಶ್ ಎಂ.ಎನ್ | ಕಾರ್ಯದರ್ಶಿಗಳು, ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಆನಂದ ನಗರ, 1ನೇ ಬ್ಲಾಕ್. |
| 13. | ಶ್ರೀ. ರಾಮಸ್ವಾಮಿ | ಸ್ಥಳೀಯ ನಿವಾಸಿ |
| 14. | ಶ್ರೀ. ಚಂದ್ರಮೋಹನ್ | ಸ್ಥಳೀಯ ನಿವಾಸಿ |
| 15. | ಶ್ರೀ. ಅರುಣ್ ಕಾರಂತ್ | ಸ್ಥಳೀಯ ನಿವಾಸಿ |
| 16. | ಶ್ರೀ. ಎಂ.ಆರ್.ಗೋಪಿನಾಥ್ ರಾವ್ | ಸ್ಥಳೀಯ ನಿವಾಸಿ |
| 17. | ಶ್ರೀ. ನಂದಕುಮಾರ್ | ಸ್ಥಳೀಯ ನಿವಾಸಿ |
| 18. | ಶ್ರೀ. ಲಕ್ಷ್ಮೀ ನಾರಾಯಣ್ | ಸ್ಥಳೀಯ ನಿವಾಸಿ |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ, ಶ್ರೀ. ಎಂ. ವಿಘ್ನೇಶ್ವರ್ ಮತ್ತು ಶ್ರೀ. ಶ್ರೇಯಸ್ ಎಂ.ಎಸ್. ಸಹಾಯಕ ಅಭಿಯಂತರರು (ಕಿಯಾನಿಕ್ಸ್) ವಾರ್ಡ್ ಸಂಖ್ಯೆ-21 ರವರು, ವಾರ್ಡ್ ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

ಈ ಹಿಂದಿನ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಈ ಸಭೆಯಲ್ಲಿ ತಿಳಿಸಿರುತ್ತಾರೆ.

1. **ಕಾಮಗಾರಿ ವಿಭಾಗ:**

- ಆನಂದನಗರದ ಮುಖ್ಯರಸ್ತೆಯ ಹಾಗೂ ಸುತ್ತಮುತ್ತಲಿನ ಪ್ರದೇಶದ ಚರಂಡಿಗಳ ಹೂಳು ತೆಗೆಸಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

- ಆನಂದನಗರ ವ್ಯಾಪ್ತಿಯಲ್ಲಿ ಬರುವ ರೋಡ್‌ಹಂಪ್‌ಗಳಿಗೆ ಬಣ್ಣ ಹಾಕಿಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ಆನಂದನಗರ ಮುಖ್ಯರಸ್ತೆಯ ಪಾದಚಾರಿ ಮಾರ್ಗವನ್ನು ಪರಿಶೀಲಿಸಿ ದುರಸ್ಥಿಪಡಿಸಲು ವಾರ್ಡ್‌ನ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
- ಆನಂದನಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆ ಮಾರ್ಗಸೂಚನೆಯ ಬೋರ್ಡ್‌ಗಳನ್ನು ಹಾಕಿಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

2. **<u>ಬಿ.ಡಬ್ಲ್ಯೂ.ಎಸ್.ಎಸ್.ಬಿ</u>**

- ಆನಂದನಗರದ 5ನೇ ಮುಖ್ಯರಸ್ತೆಯಲ್ಲಿ ಸೀವೆಜ್ ಪೈಪ್ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಆನಂದನಗರ 7ನೇ ಮುಖ್ಯರಸ್ತೆಯ ಎ.ಜಿ.ಎಸ್ ಕಾಲೋನಿ ಬಳಿ ಚರಂಡಿಯನ್ನು ಸ್ವಚ್ಛಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- ಅಮರಜ್ಯೋತಿ ಪಾರ್ಕ್ ಬಳಿ ಚರಂಡಿ ಬ್ಲಾಕ್ ಆಗುತ್ತಿದ್ದು, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
- 3ನೇ ಮುಖ್ಯರಸ್ತೆಯಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಾಸವಾಗುತ್ತಿದ್ದು. ಅದನ್ನು ಪರಿಶೀಲಿಸಿ ಬಾಲಾಜಿ ಗಾರ್ಡನ್ ಬಳಿ ನೀರಿನ ವಾಲ್ ಅಳವಡಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು

3. **<u>ಅರಣ್ಯ ಇಲಾಖೆ:</u>**

- ಆನಂದ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಜೋತು ಬಿದ್ದಿರುವ ಮರದ ಕೊಂಬೆಗಳನ್ನು ಕತ್ತರಿಸಿ ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ಸಮಸ್ಯೆ ಬಗೆಹರಿಸಲು ತೀರ್ಮಾನಿಸಲಾಯಿತು.

4. **<u>ಘನತ್ಯಾಜ್ಯ ಮತ್ತು ತೋಟಗಾರಿಕೆ ಇಲಾಖೆ:</u>**

- ಆನಂದನಗರ ಮತ್ತು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯಾನವನಗಳನ್ನು ಸ್ವಚ್ಛಗೊಳಿಸುವಂತೆ ಕ್ರಮಕೈಗೊಳ್ಳಲು ಘನತ್ಯಾಜ್ಯ ಮತ್ತು ತೋಟಗಾರಿಕೆ ವಿಭಾಗದವರಿಗೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 21, ಹೆಬ್ಬಾಳ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 21, ಹೆಬ್ಬಾಳ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ